ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೇ ಮೂರು ದಿವಸಗಳಿಂದ ನನ್ನ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಸರ್ಕಾರದವರು ಉತ್ತರ ಕೊಡುತ್ತಾರೋ ಇಲ್ಲವೋ ಎಂದು ಕೇಳುತ್ತೇನೆ.

(ಗೊಂದಲ)

ಅಕ್ರಮ ಕಲ್ಲು ಗಣಿ ವ್ಯವಹಾರ

೩೦೭(೩೫೭) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;—

ಅ) ರಾಜ್ಯದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಅಂದರೆ ಯಲಬುರ್ಗ, ಹುನಗುಂದ, ತಕ್ಕಲಕೋಟೆ, ಕೊಪ್ಪಳ ಇತ್ಯಾದಿಗಳಲ್ಲಿ ಕೆಲವರು ರೈತರಿಂದ ನೇರವಾಗಿ ಜಮೀನನ್ನು ಖರೀದಿಸಿಯೋ, ಅಥವಾ ಗುತ್ತಿಗೆ ಹಿಡಿದೋ ಅಕ್ರಮವಾಗಿ ಕಲ್ಲು–ಗಣಿ ವ್ಯವಹಾರ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ನಿಯಂತ್ರಿಸಲು ಕೈಗೊಂಡ ಕ್ರಮಗಳೇನು ?

ಇ) ಗ್ರಾಮಾಂತರ ಪ್ರದೇಶದಲ್ಲಿಯ ಕಲ್ಲು– ಗುತ್ತಿಗೆಯ ವ್ಯವಹಾರವನ್ನು ಆಯಾ ಮಂಡಳದ ಕಕ್ಷೆಗೆ ಒಳಪಡಿಸುವ ವಿಚಾರ ಏನಾದರೂ ಸರ್ಕಾರದವರ ಮುಂದಿದೆಯೇ ?

ಶ್ರೀ ರವೀಶ್ ಪಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಬಂದಿದೆ.

ಆ) ಉಚ್ಚ ನ್ಯಾಯಾಲಯದ ದಿನಾಂಕ ೧೪–೭–೮೭ ರ ತೀರ್ಪಿನ ಪ್ರಕಾರ ಹಳೆ ಮೈಸೂರು ಸಂಸ್ಥಾನದ ೯ ಜಿಲ್ಲೆಗಳು ಮತ್ತು ಬಳ್ಳಾರಿ, ಕೊಳ್ಳೇಗಾಲ ದಕ್ಷಿಣ ಕನ್ನಡ ಈ ಜಿಲ್ಲೆಗಳಲ್ಲಿ ಪಟ್ಟಾ ಜಮೀನಿನಲ್ಲಿರುವ ಖನಿಜ ಸಂಪತ್ತನ್ನು ತೆಗೆಯುವ ಬಗ್ಗೆ ಯಾವುದೇ ಇಲಾಖೆಯ ಅಧಿಕಾರಿಗಳು ಅಡಚಣೆ ಮಾಡಬಾರದೆಂದು ತಿಳಿಸಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಗಮನಕ್ಕೆ ಬಂದ ಅಕ್ರಮ ಗಣಿಗಾರಿಕೆ ಬಗ್ಗೆ ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ ಮತ್ತು ನ್ಯಾಯಾಲಯಗಳಲ್ಲಿ ಎಫ್. ಐ. ಆರ್. ಸಲ್ಲಿಸಲಾಗಿದೆ. ಕಾನೂನು ರೀತಿ ಮಂಜೂರು ಮಾಡಿರುವ ಗಣಿ ಗುತ್ತಿಗೆ ಬಿಟ್ಟು ಪಟ್ಟಾ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದರೆ ಅಂತಹವರ ಮೇಲೆ ಕಂದಾಯ ಇಲಾಖೆಯು ಕ್ರಮ ತೆಗೆದುಕೊಂಡಿರುತ್ತದೆ ಎಂದು ತಿಳಿದು ಬಂದಿದೆ.

ಇ) ಇಲ್ಲ.

ಕಂಬಾರ ಕೈಗಾರಿಕೆಯ ಸಂಘ ಸಂಸ್ಥೆಗಳ ಬಗ್ಗೆ

೩೦೯(೮೯) ಶ್ರೀ ಚಂದ್ರಕಾಂತ ಸಿ. ಬೆಲ್ಲಾದ್ (ಧಾರವಾಡ ಶಹರ).—ಸಣ್ಣ ಪ್ರಮಾಣದ ಕೈಗಾರಿಕಾ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;—

ಅ) ಕರ್ನಾಟಕ ರಾಜ್ಯದಲ್ಲಿ ಕಂಬಾರ ಕೈಗಾರಿಕೆಯ ಸಂಘ ಸಂಸ್ಥೆಗಳು ಎಷ್ಟು ನೋಂದಾಯಿಸಿರುತ್ತವೆ. ಅವುಗಳಲ್ಲಿ ಗುಡಿ ಕೈಗಾರಿಕೆಗಳಾಗಿ ಖಾದಿ ಗ್ರಾಮೋದ್ಯೋಗ ಮಂಡಲಿಯಿಂದ ಧನಸಹಾಯದ ಮೇಲೆ ನಡೆಯುತ್ತಿರುವ ಸಂಘಗಳೆಷ್ಟು? (ಪ್ರತ್ಯೇಕವಾಗಿ ೩ ವರ್ಷ ೧೯೮೨–೮೫ರ ವರೆಗೆ ಕೊಡುವುದು)

ಆ) ಕಂಬಾರ ಕೈಗಾರಿಕೆಗಳಿಗೆ ವೈಯಕ್ತಿಕ ಹಾಗೂ ಸಂಘ ಸಂಸ್ಥೆಗಳಿಗೆ ಕೈಗಾರಿಕೆಯ ಮೂಲ ವಸ್ತುಗಳಾದ ಪುಣ್ಣು ಹಾಗೂ ಉರಪಲು ಕಟ್ಟಿಗೆ ಪೂರೈಕೆಯ ಪ್ರಮಾಣವನ್ನು ಕಳೆದ ೩ ವರ್ಷಗಳ ವಿವರ ಒದಗಿಸುವುದು ?

ಇ) ಕುಂಬಾರ ಸಂಘ ಸಂಸ್ಥೆಗಳ ಸದಸ್ಯತ್ವದಿಂದಲೂ ಹಾಗೂ ವ್ಯಕ್ತಿಶಃ ತೊಡಗಿರುವ ಎಷ್ಟು ಕುಟುಂಬಗಳು ಹಾಗೂ ಜನರು ಈ ಉದ್ಯೋಗದಲ್ಲಿ ತೊಡಗಿರುವರು ಎಂಬ ಸಂಖ್ಯೆಯ ವಿವರ ನೀಡುವಿರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕಾ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಆ) ಸಹಕಾರ ಸಂಘಗಳ ನಿಬಂಧಕರು ರಾಜ್ಯದಲ್ಲಿ ಸಹಕಾರ ಸಂಘಗಳನ್ನು ನೋಂದಾಯಿಸುವ ಅಧಿಕಾರವನ್ನು ಪಡೆದಿರುತ್ತಾರೆ. ಅದೇ ರೀತಿ ಆಯಾ ಜಿಲ್ಲೆಯ ಸಂಘ ಸಂಸ್ಥೆಗಳ ನೋಂದಣಿ ಅಧಿಕಾರಿ ಅಧಿಕಾರವನ್ನು ಪಡೆದಿರುತ್ತಾರೆ. ನೋಂದಾಯಿಸಿದ ಸಂಘ ಸಂಸ್ಥೆಗಳಲ್ಲಿ ಕರ್ನಾಟಕ ರಾಜ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಗೆ ಸಂಬಂಧಪಟ್ಟ ಸಂಘ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

ವರ್ಷ	ಕುಂಬಾರರ ಸಹಕಾರ ಸಂಘಗಳ ಸಂಖ್ಯೆ	ಕುಂಬಾರ ಸಂಸ್ಥೆಗಳ ಸಂಖ್ಯೆ
೧೯೮೨-೮೩	೬	—
೧೯೮೩-೮೪	೭	೭
೧೯೮೪-೮೫	೧೯	೬
	೩೨	೧೩

ಮೇಲ್ಕಂಡ ಸಂಘ ಸಂಸ್ಥೆಗಳಿಗೆ ಖಾದಿ ಮಂಡಲಿಯಿಂದ ಹಣ ಸಹಾಯವನ್ನು ಹಾಗೂ ತಾಂತ್ರಿಕ ನೆರವನ್ನು ಒದಗಿಸಲಾಗಿರುತ್ತದೆ. ಈ ಎಲ್ಲಾ ಸಂಘ ಸಂಸ್ಥೆಗಳು ಚಾಲ್ತಿಯಲ್ಲಿದ್ದು ಕೆಲಸಗಳನ್ನು ಪೂಡುತ್ತಿರುತ್ತವೆ.

ಆ) ಕುಂಬಾರ ಕೈಗಾರಿಕೆ ಉದ್ದಿಮೆ ಆಸಂಗಟಿತ ಕೈಗಾರಿಕಾ ಕ್ಷೇತ್ರವಾಗಿರುತ್ತದೆ, ಕುಂಬಾರ ಕಸಬುದಾರರಿಗೆ ಬೇಕಾದ ಮೂಲ ವಸ್ತು ಮಣ್ಣು ಹಾಗೂ ಸೌದೆ, ಸಾಮಾನ್ಯವಾಗಿ ಮಣ್ಣನ್ನು ಸರ್ಕಾರಿ ಸ್ವಾಮ್ಯದ ಕೆರೆಯಂಗಳ ಹಾಗೂ ನದಿ ದಂಡೆಗಳಿಂದ ಪುಕ್ಕಟೆಯಾಗಿ ಇಲ್ಲವೆ ಖಾಸಗಿ ವ್ಯಕ್ತಿಗಳ ಗದ್ದೆಗಳಿಂದ ಹಣಕೊಟ್ಟು ಪಡೆಯುತ್ತಾರೆ. ಈ ಬಗ್ಗೆ ಯಾವ ಕುಂಬಾರ ಕಸಬುದಾರನು ಪ್ರತ್ಯೇಕವಾಗಿ ಲೆಕ್ಕವನ್ನು ಇಡುವುದಿಲ್ಲ. ಆದ್ದರಿಂದ ಖಾದಿ ಗ್ರಾಮೋದ್ಯೋಗ ಮಂಡಲಿಯಲ್ಲಿ ಸಂಘ ಸಂಸ್ಥೆಗಳು ತಾವೇ ಒದಗಿಸಿಕೊಂಡ ಮಣ್ಣು ಸೌದೆ ಇತ್ಯಾದಿಗಳ ಲೆಕ್ಕವನ್ನು ಇಟ್ಟಿರುವುದಿಲ್ಲ.

ಇ) ಕುಂಬಾರ ಸಂಘ ಸಂಸ್ಥೆ ಸದಸ್ಯರಿಂದ ವ್ಯಕ್ತಿಶಃ ೧೯೮೭-೮೮ನೇ ಸಾಲಿನಲ್ಲಿ ಒಟ್ಟು ೪,೭೮೫ ಪೂರ್ಣಾವಧಿ ಹಾಗೂ ೬,೩೭೫ ಅರೆಕಾಲಿಕ ಸಂಖ್ಯೆ ಕಸಬುದಾರರು ನಿರತರಾಗಿರುತ್ತಾರೆ.

ಹಿರಿಯೂರು ತಾಲ್ಲೂಕಿನಲ್ಲಿ ಕೈಗಾರಿಕೆ ಸ್ಥಾಪನೆ

೩೧೦(೩೮೩) ಶ್ರೀ ಆರ್. ರಾಮಯ್ಯ(ಹಿರಿಯೂರು).—ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;—

ಅ) ಹಿರಿಯೂರು ತಾಲ್ಲೂಕು ಕೈಗಾರಿಕಾ ರಂಗದಲ್ಲಿ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಯಾವುದಾದರು ಒಂದು ಕೈಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿದೆಯೇ?

ಆ) ಇದನ್ನು ಕಾರ್ಯರೂಪಕ್ಕೆ ತರಲು ಇನ್ನೆಷ್ಟು ಸಮಯ ಬೇಕಾಗುವುದು ?

ಶ್ರೀ ವೀರಣ್ಣ,(ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು).—

ಆ) ಸರ್ಕಾರದ ಗಮನಕ್ಕೆ ಬಂದಿದೆ. ಹಿರಿಯೂರನ್ನು ವಲಯ-೩ರಲ್ಲಿ ಸೇರಿಸಲಾಗಿದ್ದು ಇಲ್ಲಿ ಸ್ಥಾಪಿಸುವ ಹೊಸ ಕೈಗಾರಿಕೆಗಳಿಗೆ ಶೇಕಡ ೨೦ ಸಬ್ಸಿಡಿಯನ್ನು ನೀಡುವುದರಿಂದ ಹೊಸ ಕೈಗಾರಿಕೆಯನ್ನು ಸ್ಥಾಪಿಸಲು ಪ್ರೋತ್ಸಾಹಕವಾಗಿದೆ.